ವಿಚಾರ ಮಾಡುತ್ತೇವೆ ಎಂದು ಹೇಳಿದ್ದೀರಿ. ಆ ಕಛೇರಿಯು ಇವತ್ತು ನಾಳೆ ಅಥವಾ ಇನ್ನು ಆರು ತಿಂಗಳೊಳಗೆ ಬೀಳುತ್ತದೆ. ಆದ ಕಾರಣ, 93-94ರ ಸಾಲಿನಲ್ಲಿ ಡೆಫ್‌ನೇಟಾಗಿ ಈ ಕೆಲಸವನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಕೆ.ಹೆಚ್. ರಂಗನಾಥ್ : ಇದನ್ನು 1993-94ರ ಬಜೆಟ್‌ಗೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಕೊರಟಗೆರೆಯಲ್ಲಿ ಮುನ್ಸೀಫ್ ಕೋರ್ಟ್ ಕಟ್ಟಡ

67 - ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊರಟಗೆರೆಯಲ್ಲಿರುವ ಮುನ್ಸೀಫ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯವು ಬಾಡಿಗೆ ಕಟ್ಟಡದಲ್ಲಿ ಕೆಲಸ ನಿರ್ವಹಿಸುತ್ತಿದ್ದು ಸ್ಥಳಾವಕಾಶದ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ನ್ಯಾಯಾಲಯ ಕಟ್ಟಡ ಕಟ್ಟಲು ಸರ್ಕಾರ ಯಾವ ಕ್ರಮ ಕೈಗೆದುಕೊಂಡಿದೆ?

ಇ) ಈ ಕಟ್ಟಡವನ್ನು ಎಷ್ಟು ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಕೊರಟಗೆರೆ ಮುನ್ಸೀಫ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯವು ಸುಮಾರು 3 ವರ್ಷಗಳಿಂದ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಈ ನ್ಯಾಯಾಲಯದ ಸ್ಥಳಾವಕಾಶದ ಕೊರತೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ದೂರುಗಳು ಸರ್ಕಾರಕ್ಕೆ ಬಂದಿರುವುದಿಲ್ಲ.

ಆ) ಈ ಬಗ್ಗೆ ಕರ್ನಾಟಕ ಉಚ್ಚನ್ಯಾಯಾಲಯದಿಂದ ಯಾವುದು ಪ್ರಸ್ತಾವನೆಗಳು ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಸಿ. ವೀರಭದ್ರಯ್ಯ : ಕೊರಟಗೆರೆಯಲ್ಲಿ ಮುನ್ಸೀಫ್ ನ್ಯಾಯಾಲಯದಲ್ಲಿ ಜನಗಳಿಗೆ ಕುಳಿತುಕೊಳ್ಳುವುದಕ್ಕೆ ಅವಕಾಶ ಇಲ್ಲ. ಒಂದು ಸಣ್ಣ ರೋಡಿನಲ್ಲಿ ಜನರು ನಿಂತುಕೊಳ್ಳಬೇಕಾಗುತ್ತದೆ. ನಾನು ಅನೇಕ ಸಲ ಸರ್ಕಾರದ ಗಮನಕ್ಕೆ ಈ ವಿಚಾರದಲ್ಲಿ ಬರೆದಿದ್ದರೂ, ಹೇಳಿದ್ದರೂ ಇಲ್ಲಿ ಯಾವುದೂ ಕೆಲಸ ಆಗಿಲ್ಲ. ದಯಮಾಡಿ ಸರ್ಕಾರದವರು ಈ ಕೂಡಲೇ ಮುನ್ಸೀಫ್ ನ್ಯಾಯಾಲಯದ ಕಟ್ಟಡವನ್ನು ಕಟ್ಟಿಸಿಕೊಡಬೇಕು. ಅದಕ್ಕೆ ನಾನು ಜಾಗದ ವ್ಯವಸ್ಥೆ ಕೂಡ ಮಾಡಿದ್ದೇನೆ. ಯಾವಾಗ ಕಟ್ಟಡ ಕಟ್ಟುತ್ತೀರಿ, ಮತ್ತು ಈ ವ್ಯವಸ್ಥೆ ಯಾವಾಗ ಮಾಡುತ್ತೀರಿ?

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಅದಷ್ಟು ಬೇಗ ಎಲ್ಲೆಲ್ಲಿ ಮುನ್ಸೀಫ್ ನ್ಯಾಯಾಲಯಗಳಿಗೆ ಕಟ್ಟಡ ಇಲ್ಲವೋ ಅಲ್ಲೆಲ್ಲ ಕಟ್ಟುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ನಮ್ಮ ರಾಜ್ಯದಲ್ಲಿ ಈಗ 53 ಸ್ಥಳಗಳಿಗೆ ಕಟ್ಟಡಗಳನ್ನು ಒದಗಿಸಬೇಕು. ಈ 53 ಸ್ಥಳಗಳಿಗೆ ಕಟ್ಟಡಗಳನ್ನು ಒದಗಿಸುವುದಕ್ಕೆ ನಿರ್ಧಾರ ಮಾಡಿದ್ದೇವೆ. ಅದರೆ ಅದನ್ನು ಹಂತ ಹಂತವಾಗಿ ಮಾಡಬೇಕಾಗುತ್ತದೆ. ಕೆಲವು

ಕೋರ್ಟುಗಳಿಗೆ 10 ವರ್ಷಗಳಿಂದ ಕಟ್ಟಡ ಇಲ್ಲ. ಆದ್ಯತೆ ಆಧಾರದ ಮೇಲೆ ಹಣಕಾಸು ಎಷ್ಟು ಸಿಗುತ್ತದೆ ನೋಡಿಕೊಂಡು ಕಟ್ಟಡವನ್ನು ಮಾಡುತ್ತೇವೆ. ಕೊರಟಗೆರೆಯಲ್ಲಿ ಅಷ್ಟು ವಿಶೇಷವಾಗಿ ಕಷ್ಟ ಇದ್ದರೆ ಅದಕ್ಕೆ ಆದ್ಯತೆ ಕೊಡುವ ಪ್ರಯತ್ನ ಮಾಡೋಣ.

ಶ್ರೀ ಸಿ. ವೀರಭದ್ರಯ್ಯ : ಈ ಕೂಡಲೇ ಕಟ್ಟಡ ಆಗಲೇಬೇಕು. ಇಲ್ಲದಿದ್ದರೆ ಬಹಳ ತೊಂದರೆ ಆಗುತ್ತದೆ. ಜನಗಳು ರೋಡಿನಲ್ಲಿ ಬಿಸಿಲಿನಲ್ಲಿ ನಿಂತುಕೊಂಡು ಕಾಯಬೇಕಾದ ಸ್ಥಿತಿ ಇದೆ.

ಶ್ರೀ ಟಿ.ಎಂ. ಮಂಜುನಾಥ್ : ತಮಗೆ ಗೊತ್ತಿರುವ ಹಾಗೆ ಕೊರಟಗೆರೆ ಹಿಂದುಳಿದ ಪ್ರದೇಶ. ಅದಕ್ಕೆ ತಾವು ಮೊದಲನೆಯ ಆದ್ಯತೆ ಕೊಟ್ಟು ಈ ವರ್ಷವೇ ಪ್ರಾರಂಭ ಮಾಡುವುದಕ್ಕೆ ಸಹಕರಿಸುತ್ತಿರೆಂದು ನಾನು ಕೇಳುತ್ತಿದ್ದೇನೆ. ಅಲ್ಲಿ ಬಹಳ ಅವಶ್ಯಕತೆ ಇದೆ. ದಯವಿಟ್ಟು ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಅಲ್ಲಿ ಅವಶ್ಯಕತೆ ಇದೆ ಎಂದು ತಾವು ಹೇಳತಕ್ಕಂತಹ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ಆದ್ಯತೆ ಕೊಡುತ್ತೇವೆ ಎಂದು ಹೇಳಿದ್ದೇನೆ. ಹೆಚ್ಚು ಕಷ್ಟ ಇದ್ದರೆ ವರ್ಷದ ಬಜೆಟ್‌ನ್ನು ನೋಡಿಕೊಂಡು ಮೊದಲೇ ಅದನ್ನು ಮಾಡೋಣ.

ಸಿಂಧನೂರು ಹಳ್ಳ ಹಾಗೂ ಪೋತನಾಳ ಹಳ್ಳಕ್ಕೆ ಸೇತುವೆಯ ನಿರ್ಮಾಣ.

155-ಶ್ರೀ ಬಿ. ಹಂಪನಗೌಡರ್ (ಸಿಂಧನೂರು) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನೆರೆಹಾವಳಿಯ ಪ್ರವಾಹದಿಂದ ಸಿಂಧನೂರು ಹಳ್ಳ ಹಾಗೂ ಪೋತನಾಳ ಹಳ್ಳಕ್ಕೆ ಕಟ್ಟಿದ ಸೇತುವೆ ನಾಶವಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಹೊಸ ಸೇತುವೆ ನಿರ್ಮಾಣ ಮಾಡುವ ಉದ್ದೇಶ ಸರಕಾರಕ್ಕೆ ಇದೆಯೇ?*

ಇ) *ಹಾಗಿದ್ದಲ್ಲಿ, ಹೊಸ ಸೇತುವೆಗಳ ನಿರ್ಮಾಣವನ್ನು ಯಾವಾಗ ಪ್ರಾರಂಭಿಸಲಾಗುವುದು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು) :

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸಧ್ಯದಲ್ಲಿ ಈ ಎರಡೂ ಮುಳುಗು ಸೇತುವೆಗಳನ್ನು ದುರಸ್ತಿಪಡಿಸಿ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ಸಿಂಧನೂರು ಹಳ್ಳಕ್ಕೆ ಹೊಸ ಪರ್ಯಾಯ ಸೇತುವೆ ನಿರ್ಮಾಣ ಮಾಡುವ ಬಗ್ಗೆ ಸರ್ಕಾರವು ಪರಿಶೀಲಿಸುವುದು.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಹಂಪನಗೌಡ : ನಾನು ಸಿಂಧನೂರು ಹಳ್ಳಿ ನೆರೆಹಾವಳಿಯಿಂದ ಸೇತುವೆ ಸಂಪೂರ್ಣವಾಗಿ ನಾಶವಾಗಿದೆ ಎಂಬುದರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಉತ್ತರದಲ್ಲಿ ಎರಡು ಸೇತುವೆಗಳು ನೆರೆ ಹಾವಳಿಯಿಂದ ತುಂಬಾ ನಷ್ಟವಾಗಿದೆ ಎಂದು ಹೇಳಿದ್ದಾರೆ. ಆದರೆ ಮೂರನೆಯ ಪ್ರಶ್ನೆಗೆ ಉತ್ತರದಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ನಾನು ಕೇಳುತ್ತಿರುವುದು ಈ ಸೇತುವೆ ನಾಲ್ಕು ಜಿಲ್ಲೆಗಳಿಗೆ ಸಂಪರ್ಕ ಹೊಂದಿರತಕ್ಕಂತಹ ಸೇತುವೆ. ಇದು ಬಹಳಷ್ಟು